11



# ಸನ್ನಿವೇಶ ರಚನೆ



ಸೂಚನೆ :

- ಚಿತ್ರದಲ್ಲಿರುವ ಸನ್ನಿವೇಶವನ್ನು ಗಮನಿಸಲು ತಿಳಿಸಿ, ವಿವರಣೆಯಲ್ಲಿರುವ ಮುಖ್ಯ ಪದಗಳನ್ನು ಬಳಸಿ ಮಾತನಾಡಲು ಮಕ್ಕಳಿಗೆ ಅವಕಾಶ ನೀಡಿ.
- ಶಿಕ್ಷಕರು ಸನ್ನಿವೇಶವನ್ನು ಅರ್ಥಮಾಡಿಕೊಂಡು ಮುಖ್ಯ ಪದಗಳನ್ನು ಆದರಿಸಿ ವಿವರಿಸಿ.

## ಮೀನು ನವಿಲು ಬುಗುರಿ ಗುಲಾಬಿ

ಇದು ನಮ್ಮ ನಗರದ ಉದ್ಯಾನವನ. ಸಂಜೆ ತಂಗಾಳಿಯಲ್ಲಿ ತಂದೆ - ತಾಯಿಯ ಜೊತೆಯಲ್ಲಿ ಮಕ್ಕಳು ಆಡಲು ಬರುತ್ತಾರೆ.

ಇಂದು ಸುಮಾ ಮತ್ತು ಸುಮಂತ, ಅವರ ತಂದೆ-ತಾಯಿ ಜೊತೆ ವನಕ್ಕೆ ಬಂದಿದ್ದಾರೆ. ಸುಮಂತನ ಗೆಳೆಯರು ಬಂದಿದ್ದಾರೆ. ಸುಮಾಳ ಕಣ್ಣಿಗೆ ಬಣ್ಣ ಬಣ್ಣದ ಗುಲಾಬಿಗಳು ಬಿದ್ದವು. ಹೂಗಳ ಸುವಾಸನೆ ಉದ್ಯಾನ ವನದಲ್ಲೆಲ್ಲ ಹರಡಿದೆ. ಸುಮಂತನು ತನ್ನ ಗೆಳೆಯರೊಡನೆ ಕಾರಂಜಿಯನ್ನು ನೋಡುತ್ತಿದ್ದಾನೆ. ಕಾರಂಜಿಯ ಹೊಂಡದಲ್ಲಿ ಬಣ್ಣ ಬಣ್ಣದ ಮೀನುಗಳಿವೆ. ಮೀನಿನ ಆಕೃತಿಯ ಈ ಕಾರಂಜಿಯಲ್ಲಿ ಮೀನಿನ ಬಾಯಿಯಿಂದ ನೀರು ಚಿಮ್ಮುತ್ತಿದೆ.

ಕೆಲವು ಮಕ್ಕಳು ಚಂಡು ಆಡುತ್ತಿದ್ದಾರೆ. ಪುಟ್ಟನ ತಂದೆ ಪುಟ್ಟನಿಗೆ ಗರಿಬಿಚ್ಚಿ ಕುಣಿಯುತ್ತಿರುವ ನವಿಲನ್ನು ತೋರಿಸುತ್ತಿದ್ದಾರೆ. ಕಿಟ್ಟು ಬುಗುರಿಯಲ್ಲಿ ಆಟವಾಡುತ್ತಿದ್ದಾನೆ. ಸೀತ ಮತ್ತು ಗೀತ ಕೂಡ ಬಂದಿದ್ದಾರೆ. ಸೀತಳ ತಾಯಿ ತಿಂಡಿ ತಂದಿದ್ದರು. ಸೀತಾಳಿಗೆ ಅದನ್ನು ಕೊಡುತ್ತಿದ್ದಾರೆ.



a





# ಸನ್ನಿವೇಶ ರಚನೆ



ಸೂಚನೆ :

- ಚಿತ್ರದಲ್ಲಿರುವ ಸನ್ನಿವೇಶವನ್ನು ಗಮನಿಸಲು ತಿಳಿಸಿ, ವಿವರಣೆಯಲ್ಲಿರುವ ಮುಖ್ಯ ಪದಗಳನ್ನು ಬಳಸಿ ಮಾತನಾಡಲು ಮಕ್ಕಳಿಗೆ ಅವಕಾಶ ನೀಡಿ.
- ಶಿಕ್ಷಕರು ಸನ್ನಿವೇಶವನ್ನು ಅರ್ಥಮಾಡಿಕೊಂಡು ಮುಖ್ಯ ಪದಗಳನ್ನು ಆದರಿಸಿ ವಿವರಿಸಿ.

## ಗೂಡು ಹೂವು ರೂಪಾಯಿ ದೂರವಾಣಿ

ಇದು ನಮ್ಮ ಊರಿನ ಪೇಟೆ ಬೀದಿ. ಇಲ್ಲಿ ಅಂಗಡಿಗಳು ಬಹಳ ಇವೆ. ಬೀದಿಯ ಆ ಬದಿಯಲ್ಲಿ ಮಸೀದಿ ಇದೆ ಮತ್ತು ಈ ಬದಿಯಲ್ಲಿ ನೀಲಮ್ಮ ಮರದ ಕೆಳಗೆ ಹೂವು ಮಾರುತ್ತಿದ್ದಾರೆ. ಇದೇ ಮರದ ಮೇಲೆ ಒಂದು ಗೂಡು ಇದೆ.

ಸೀತ ಮತ್ತು ಗೀತ ಹೂವು ಕೊಂಡುಕೊಳ್ಳುತ್ತಿದ್ದಾರೆ. ಸೀತ ರೂಪಾಯಿ ಕೊಡುತ್ತಿದ್ದಾಳೆ. ಇದೇ ಸಮಯದಲ್ಲಿ ಹಕ್ಕಿಯ ಗೂಡಿನಿಂದ ಒಂದು ಮರಿ ಬಿತ್ತು. ಗೀತ ಬೀಳುತ್ತಿರುವ ಮರಿಯನ್ನು ನೋಡಿ ಗಾಬರಿಯಾದಳು.

ಚೇತನ ತಾಯಿಯ ಜೊತೆ ಪೇಟೆಗೆ ಬಂದಿದ್ದಾನೆ. ಆಟಿಕೆಗಳ ಅಂಗಡಿಯಲ್ಲಿ ಹಠಮಾಡಿ ಆಟದ ದೂರವಾಣಿಯನ್ನು ಕೊಂಡುಕೊಂಡನು. ತಾಯಿ ಅಂಗಡಿಯವನಿಗೆ ರೂಪಾಯಿ ನೀಡಿದರು.


ಚಂದ
ಆಟಿಕೆಗಳು
ಪಾಂಡುರಂಗ
ಕಾಫಿ
ಪೂಜಾ ಟೆಕ್ಸ್‌ಟೈಲ್ಸ್

13



## ಸನ್ನಿವೇಶ ರಚನೆ

256

ಸೂಚನೆ :

- ಚಿತ್ರದಲ್ಲಿರುವ ಸನ್ನಿವೇಶವನ್ನು ಗಮನಿಸಲು ತಿಳಿಸಿ, ವಿವರಣೆಯಲ್ಲಿರುವ ಮುಖ್ಯ ಪದಗಳನ್ನು ಬಳಸಿ ಮಾತನಾಡಲು ಮಕ್ಕಳಿಗೆ ಅವಕಾಶ ನೀಡಿ.
- ಶಿಕ್ಷಕರು ಸನ್ನಿವೇಶವನ್ನು ಅರ್ಥಮಾಡಿಕೊಂಡು ಮುಖ್ಯ ಪದಗಳನ್ನು ಆದರಿಸಿ ವಿವರಿಸಿ.

# ಆನೆ ಕಾಗೆ ಮನೆ ಬದನೆಕಾಯಿ

ಇದು ರೇಖಾ-ರಾಜೇಶರ ಮನೆ. ಅವರ ತಂದೆ ಬಸವ ಒಬ್ಬ ಕುಂಬಾರ. ರೇಖಾ-ರಾಜೇಶ ಮಣ್ಣಿನಲ್ಲಿ ಆಡುತ್ತಿದ್ದಾರೆ. ಮಕ್ಕಳಿಗೆ ಆಡಲು ತಂದೆ ಮಣ್ಣಿನ ಆನೆ ಮಾಡಿ ಅದಕ್ಕೆ ಬಣ್ಣ ಹಚ್ಚುತ್ತಿದ್ದಾರೆ.

ಬಸವನ ಮನೆಯ ಮುಂದಿನ ಜಾಗದಲ್ಲಿ ಬದನೆಕಾಯಿ ಗಿಡವನ್ನು ಬೆಳೆಸಿದ್ದಾರೆ. ಗಿಡಗಳ ತುಂಬಾ ಬದನೆಕಾಯಿಗಳಿವೆ. ರೇಖಾಳ ತಾಯಿ ಹಾಕಿದ ಕಾಳನ್ನು ತಿನ್ನಲು ಕಾಗೆ ಬಂದಿದೆ.



a